**ಸಾಕ್ಷಿಯನ್ನು ದಿಃ 21.01.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಮ್ಮ ತಾಯಿ, ನಿಮ್ಮ ಸಹೋದರ ಹಾಗೂ ನಿಮ್ಮ ನಡುವೆ ನಡೆದ ದಾವೆಯಲ್ಲಿ ನಿಮ್ಮ ತಾಯಿ ಖುದ್ದಾಗಿ ಬಂದು ಸಾಕ್ಷಿ ನೀಡಿದ್ದಾರೆ ಎಂದರೆ ಸರಿ.

2. ನಿಮ್ಮ ಕುಟುಂಬದ ಆಗು ಹೋಗುಗಳನ್ನು ನಿಮ್ಮ ತಾಯಿಯವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ.

3. ನಿಮ್ಮ ತಾಯಿಯವರು ಈ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನೀವು ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ, ಸರಿಯಲ್ಲ.

4. ನಿಮ್ಮ ತಾಯಿ ಅನಾರೋಗ್ಯದಿಂದ ಬಳುತ್ತಿದ್ದಾರೆ ಎಂದು ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

5. ನಿಮ್ಮ ತಾಯಿಯು ವಾಸವಾಗಿರುವ ಮನೆ, ನಿಮ್ಮ ತಾತ ಕಟ್ಟಿದ್ದಾ ಅಥವಾ ನಿಮ್ಮ ತಂದೆ ಕಟ್ಟಿದ್ದಾ ಎಂದರೆ, ನಾನು ಕಟ್ಟಿದ ಮನೆಯಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ.

6. ನಾನು ಹಾಗೂ ನನ್ನ ತಾಯಿ ಇಬ್ಬರೇ ಒಂದೇ ಮನೆಯಲ್ಲಿ ವಾಸವಿರುತ್ತೇವೆ.

7. ನನಗೆ ಬೋರೆ ಹೊಸಹಳ್ಳಿ ಗ್ರಾಮದಲ್ಲಿ ಒಂದೇ ಮನೆ ಇದೆ.

8. ಖಾಲಿ ನಿವೇಶನ ನನ್ನ ತಾಯಿಗೆ ಸರ್ಕಾರದಿಂದ ಮಂಜೂರಾಗಿರುವ ನಿವೇಶನ. ನಾವು ಚಿಕ್ಕವರಿದ್ದಾಗ ಮಂಜೂರಾಗಿದ್ದು, ಯಾವಾಗ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ಆಗ ನನಗೆ ಅಂದಾಜು 13 ವರ್ಷ ಇರಬಹುದು.

9. ನಿವೇಶನ ದಕ್ಷಿಣೋತ್ತರ 30 ಅಡಿ ಹಾಗೂ ಪೂರ್ವ ಪಶ್ಚಿಮ 40 ಅಡಿ ಅಳತೆ ಇದೆ.

10. ಮಂಜೂರಾತಿ ಪತ್ರವು ನನ್ನ ತಾಯಿಯ ಸುಪರ್ದಿಯಲ್ಲ ಇತ್ತು, ಅದನ್ನು ನನ್ನ ತಮ್ಮ ಕದ್ದಿರುತ್ತಾರೆ. ಆ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇವೆ.

11. ಸದರಿ ಮಂಜೂರಾತಿ ಪತ್ರದ ದೃಢೀಕೃತ ನಕಲನ್ನು ಪಡೆಯಲು ಪಂಚಾಯತಿಯವರನ್ನು ಕೇಳಿದಾಗ, ಅವರು ಮೂಲ ದಾಖಲೆ ನೀಡಿದರೆ ಕೊಡುವುದಾಗಿ ನುಡಿಯುತ್ತಾರೆ.

12. ದಕ್ಷಿಣಕ್ಕೆ: ರಸ್ತೆ, ಉತ್ತರಕ್ಕೆ: 4 ನೇ ನಂಬರಿನ ನಿವೇಶನ, ಪಶ್ಚಿಮಕ್ಕೆ: 8 ನೇ ನಂಬರಿನ ನಿವೇಶನ, ಪೂರ್ವಕ್ಕೆ: ಖಾಲಿ ಜಾಗ, ಸದರಿ ನಿವೇಶನ ಮೇಲೆ ನಿಮ್ಮ ತಾಯಿಗೆ ಹಕ್ಕು ಮಾಲೀಕತ್ವ ಹಾಗೂ ಸ್ವಾಧೀನ ಇದೆಯಾ ಎಂದರೆ, ಇದೆ ಎಂದು ನುಡಿಯುತ್ತಾರೆ.

13. ಸದರಿ ಚಕ್ಕುಬಂದಿಯಲ್ಲಿನ ಜಾಗಕ್ಕೆ ಸ್ವಾಧೀನದಲ್ಲಿದ್ದೇವೆ, ಆ ರೀತಿ ಸ್ವಾಧೀನಕ್ಕೆ ಬಂದು 25-30 ವರ್ಷ ಆಗಿರಬಹುದು.

14. ಸದರಿ ಮೇಲೆ ಹೇಳಿದ ಜಾಗದಲ್ಲಿ ನಾವು ಕಟ್ಟಡವನ್ನು ನಿರ್ಮಾಣ ಮಾಡಿಲ್ಲ.

15. 5 ನೇ ಪ್ರತಿವಾದಿ ಪ್ರೇಮಾ ರವರ ಪತಿಯ ಹೆಸರು ಸೋಮನಾಯಕ ಎಂದರೆ, ಸರಿಯಲ್ಲ, ಸ್ವಾಮಿನಾಯಕ ಎಂದು ನುಡಿಯುತ್ತಾರೆ.

16. 5 ನೇ ಪ್ರತಿವಾದಿಯ ಮಾವನ ಹೆಸರು ತಮ್ಮನಾಯಕ ಎಂದರೆ, ಹೌದು.

17. 5 ನೇ ಪ್ರತಿವಾದಿಯ ಪತಿಯ ಹೆಸರನ್ನು ಈ ದಾವೆಯಲ್ಲಿ ಸೋಮನಾಯಕ ಬದಲಾಗಿ ಸ್ವಾಮಿನಾಯಕ ಎಂದು ತಪ್ಪಾಗಿ ಬರೆಸಿದ್ದೀರಾ ಎಂದರೆ, ಸರಿಯಲ್ಲ.

18. ಮೇಲೆ ಹೇಳಿದ ಚಕ್ಕುಬಂದಿಯಲ್ಲಿನ ನಿವೇಶನವನ್ನು ದಿಃ 25.01.1991 ರಂದು ತಮ್ಮುನಾಯಕನ ಮಗ ಸೋಮನಾಯಕ ರವರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ, ಅವರಿಗೆ ಬೇರೆ ಜಾಗ ಮಂಜೂರಾಗಿದೆ ಎಂದು ನುಡಿಯುತ್ತಾರೆ.

19. ಮೇಲೆ ಹೇಳಿದ ಚಕ್ಕುಬಂದಿಯಲ್ಲಿನ ನಿವೇಶನದ ಸ್ವಾಧೀನದಲ್ಲಿ ಪ್ರತಿವಾದಿಗಳು ಇದ್ದರೂ, ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

20. ಸರ್ಕಾರದವರು ನಿಮ್ಮ ತಾಯಿಯವರಿಗೆ ಯಾವುದೇ ಮಂಜೂರಾತಿ ಪತ್ರ ನೀಡಿದೇ ಇದ್ದರೂ, ಸುಳ್ಳು ಚಕ್ಕುಬಂದಿ ನೀಡಿ ಸುಳ್ಳು ದಾವೆ ಹಾಕಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

21. ಅಳತೆ ಕಾರ್ಯವನ್ನು ಮಾಡಿಸಿದ ದಿನಾಂಕ ನನಗೆ ಮರೆತು ಹೋಗಿದೆ, ವಕೀಲರಿಗೆ ದಾಖಲೆ ನೀಡಿದ್ದೇನೆ. ಎಷ್ಟು ವರ್ಷವಾಗಿದೆ ಎಂದು ನನಗೆ ನೆನಪಿಲ್ಲ.

22. ನೀವು ಪಂಚಾಯತಿ ನೌಕರರನ್ನು ಷರೀಕ್ ಮಾಡಿಕೊಂಡು ನಿಮ್ಮ ತಾಯಿಯ ಹೆಸರಿಗೆ ನಿಪಿ - 2 ರಿಂದ 4 ನ್ನು ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

23. ಸರ್ಕಾರದವರು ಮಂಜೂರು ಮಾಡಿದ ನಿವೇಶನದ ಖಾತೆ ನಿಮ್ಮ ತಾಯಿ ಹೆಸರಿಗೆ ಆಗಿತ್ತಾ ಎಂದರೆ, ಖಾತೆ ಆಗಿತ್ತು ಎಂದು ನುಡಿಯುತ್ತಾರೆ.

24. ಖಾತೆ ಆದ ಸಮಯದಲ್ಲಿ ಪಂಚಾಯತಿ ದಾಖಲೆಯಲ್ಲಿ ಸದರಿ ನಿವೇಶನ ಅಳತೆ ಹಾಗೂ ಚಕ್ಕುಬಂದಿ ಬರೆದಿದ್ದರಾ ಎಂದರೆ, ಬರೆದಿತ್ತು ಎಂದು ನುಡಿಯುತ್ತಾರೆ.

25. ಜಂಜರ್ ನಂಬರ್ ಹಾಗೂ ಸ್ವತ್ತಿನ ನಂಬರ್ ಏನಾಗಿತ್ತು ಎಂದರೆ, ನನಗೆ ನೆನಪಿಲ್ಲ.

26. ನಿಮ್ಮ ತಂದೆಯಿಂದ ಬಂದಿರುವ ಮನೆ ನಿಮ್ಮ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಮನೆ ಈಗ ವಾಸಕ್ಕೆ ಯೋಗ್ಯವಾಗಿರುವುದಿಲ್ಲ.

27. ನಮ್ಮ ತಂದೆಯ ಹೆಸರಿನಲ್ಲಿ ಯಾವುದೇ ನಿವೇಶನ ಇರುವುದಿಲ್ಲ.

28. ನಮ್ಮ ತಾಯಿಯ ಹೆಸರಿನಲ್ಲಿ ಇದ್ದ ಮನೆಯ ಪಳೆಯುಳಿಕೆ ಈಗ ಉಳಿದುಕೊಂಡಿದೆ.

29. ನಿಮ್ಮ ತಾಯಿಯ ಹೆಸರಿಗೆ ಯಾವುದೇ ಸರ್ಕಾರಿ ಸ್ವತ್ತು ಮಂಜೂರಾಗಿರುವುದಿಲ್ಲ ಹಾಗೂ ಯಾವುದೇ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

30. ನಿಮಗೆ ಹಾಗೂ ಪ್ರತಿವಾದಿಗಳಿಗೆ ವ್ಯಾಜ್ಯ ಯಾವ ತಾರೀಖಿನಲ್ಲಿ ಆಗಿತ್ತು ಎಂದು ಹೇಳಲು ಸಾಧ್ಯವಾ ಎಂದರೆ, ಅದಕ್ಕೆ ದಾಖಲೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಆಗ ಬೆಳಗಿನ ಜಾವ ಆಗಿದ್ದರಿಂದ ಅದನ್ನು ನೋಡಿದವರು ಯಾರೂ ಇರುವುದಿಲ್ಲ.

31. ನಾವು ದೂರು ಕೊಟ್ಟಿದ್ದು, ಆದರೆ ಪೊಲೀಸರು ನಮ್ಮ ಮೇಲೆ ಕೇಸು ದಾಖಲು ಮಾಡಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಮೇಲೆ ಯಾವುದೇ ಪ್ರಕರಣ ದಾಖಲು ಮಾಡಿಲ್ಲ.

32. ನಿಮ್ಮ ಹಾಗೂ ಪ್ರತಿವಾದಿಗಳ ನಡುವೆ ಜಗಳದಲ್ಲಿ ಗಾಯಗಳು ಆಗಿದ್ದವಾ ಎಂದರೆ, ನಮ್ಮ ತಾಯಿಗೆ ಆಗಿದ್ದವು ಎಂದು ನುಡಿಯುತ್ತಾರೆ.

33. ನೀವು ಪ್ರತಿವಾದಿಗಳ ನಿವೇಶನವನ್ನು ಲಪಟಾಯಿಸಲು, ನೀವು ಹಾಗೂ ನಿಮ್ಮ ತಾಯಿ ಶಾಮೀಲಾಗಿ ಸುಳ್ಳು ದಾವೆ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

34. ದಾವಾ ಸ್ವತ್ತಿನ ಸ್ವಾಧೀನ ಹಾಗೂ ಮಾಲೀಕತ್ವದಲ್ಲಿ ನಿಮ್ಮ ತಾಯಿ ಇಲ್ಲದಿದ್ದರೂ, ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ